Sri DIGAMBAR RAO B. KALMANKAR.—I have sent a privilege motion against the Chief Minister for his statement at Bombay regarding the border dispute.

Mr. DEPUTY SPEAKER.—That will be taken up along with the other privilege matter.

Sri H. SIDDAVEERAPPA (Harihar).—Although we have no right according to rules, as a special case I am requesting you to take up this passed over question of Sri H. C. Linga Reddy, which is of importance so far as agriculturists are concerned.

ಉಪಾಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳೋಣ.

Sri V. N. PATIL (Humnabad).—I have given notice for half-an-hour discussion. Tomorrow happens to be the last working day.

Mr. DEPUTY SPEAKER.—I will consider.

## ADJOURNMENT MOTIONS

*(Disallowed)*

Mr. DEPUTY SPEAKER.—I have received three notices of adjournment motions. I think the members have already been informed.

Sri G. CHANDRAKANTH (Bidar).—I have given you notice of an adjournment motion this morning.

Mr. DEPUTY SPEAKER.—I have already stated that strikes and lock-outs do not form subject matter of adjournment motions. The consent has been withheld and the member is informed already.

Sri G. CHANDRAKANTH.—My notice pertains to the demands of the students and the strike that is going on.

Sri S. S. SHETTAR (Hubli).—In order to consider their demands favourably, it is better that there should be discussion.

Mr. DEPUTY SPEAKER.—Consent is withheld.

Sri G. CHANDRAKANTH.—Sir, I draw your attention to proviso to rule 54(1) which says:

> "Provided that where the Speaker has refused his consent under Rule 50 or is of opinion that the matter proposed to be discussed is not in order, he may, if he thinks it necessary. read the notice of motion and state the reasons for refusing consent or holding the motion as not being in order."

Mr. DEPUTY SPEAKER.—The words used are 'if he thinks it necessary'.

Sri G. CHANDRAKANTH.—This being a very important matter, I feel the reasons for refusing consent should be stated.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಹೇಚೆ).—ಮಾನ್ಯ ಚಂದ್ರಕಾಂತ್ ಅವರು ಏನು ನಿಲುವಳಿ ಸೂಚನೆಯನ್ನು ತಂದಿದ್ದಾರೆ ಅದು ಬಹಳ ಮುಖ್ಯವಾದುದು. ಆಯುರ್ವೇದ ವಿದ್ಯಾರ್ಥಿಗಳ ಪರಿಸ್ಥಿತಿ ಕರುಣಾಜನಕವಾಗಿದೆ. ಅವರನ್ನು ಯಾರು ಕೇಳುವವರು ಇಲ್ಲ. ಸರ್ಕಾರವಿದೆಯೋ ಇಲ್ಲವೋ ಎನ್ನುವಂತೆ ಇದೆ. ಇದರ ಬಗ್ಗೆ ಏನಾದರೂ ಮಾಡಿ ಅವರ ಬೇಡಿಕೆಯನ್ನು ಮನ್ನಿಸಿ ತೀರ್ಮಾನ ಮಾಡುವುದು ಒಳ್ಳೆಯದು.

ಉಪಾಧ್ಯಕ್ಷರು.—ಆ ವಿಚಾರ ಸರ್ಕಾರಕ್ಕೆ ಸಂಬಂಧಪಟ್ಟದ್ದು. ನಾನು ಏನೂ ಮಾಡುವ ಹಾಗೆ ಇಲ್ಲ. ಈ ವಿಷಯ ಅನೇಕ ಸಾರಿ ಸಭೆಯ ಮುಂದೆ ಬಂದಿದ್ದು ಮಾನ್ಯ ಮಂತ್ರಿಗಳು ಅದರ ಬಗ್ಗೆ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಮಂತ್ರಿಗಳು ಬಹಳ ಬೇಜವಾಬ್ದಾರಿಯಿಂದ ಇದ್ದಾರೆ. ಜವಾಬ್ದಾರಿಯಿಂದ ವರ್ತಿಸಿದ್ದರೆ ಮುಷ್ಕರ ಮುಕ್ತಾಯವಾಗುತ್ತಿತ್ತು.

Sri DIGAMBAR RAO B. KALMANKAR.—The adjournment motion of the hon'ble Member Sri Chandrakant is very important and threadbare discussion of the demands of Ayurvedic students requires the attention of the House.

Mr. DEPUTY SPEAKER.—It is already disposed of.

Sri M. NAGAPPA.—I have sent another adjournment motion pertaining to the statement of the Hon'ble Chief Minister at Bombay on 10th April 1968 regarding the question of Mysore and Maharashtra border.

Mr. DEPUTY SPEAKER.—The matter has already been raised by the hon'ble Member Sri Vatal Nagaraj and the Hon'ble Chief Minister has also given a statement. Where is the necessity to raise it again? The hon'ble Member knows the rules very well. A matter already disposed of cannot be brought before the House again.

Sri M. NAGAPPA.—I draw your attention to clause (v) of rule 52. It says: "The motion shall not revive discussion on a matter which has been discussed in the same session." The matter has not been discussed; only a reference has been made to it.

Mr. DEPUTY SPEAKER.—That amounts to discussing the matter.

Sri M. NAGAPPA.—I request the Hon'ble Chair to reconsider it because no discussion has taken place on it. As I said, only a reference has been made to it, and some vague reply has been given on the floor of the House.

Mr. DEPUTY SPEAKER.—In my opinion that is sufficient. The matter has been raised and disposed of.

Sri M. NAGAPPA.—There is another matter, Sir. We are going to close our Session on the 17th according to the business. We have sent so many questions to be answered by the Government. But the Government have withheld so many answers. In this connection I want to bring to your kind notice the directions given by the Hon'ble Speaker of the Andhra Pradesh Legislative Assembly. The Ruling of the Speaker reads as follows:

On the 19th February, 1960, the Speaker of the Andhra Pradesh Legislative Assembly observed regarding the questions sent to the Government.

> "We have to receive the answers to the questions sent by us to the Government within a period of 21 days. Sometimes the departments ask for extensions. While granting it in the necessary cases we are more often rejecting the same. In spite of it they are failing to send the answer promptly. Hence I want to suggest that after the expiry of 21 days from the date of despatch of the question from our Secretariat, we will wait for two or three days more and the questions will afterwards be brought on the Table irrespective of whether the answer is received or not. We are not concerned about the receipt or otherwise of the answer. Hence I request the Government to take the necessary precautionary measures in their departments and see that answers are sent within twenty-one days. No useful purpose is served if they take five or six months."

I submit that 2 months have already elapsed and several questions have not been answered. Unless the Speaker gives definite direction to the Government, the slackness will be there and the Government will not care to answer the questions which are pending with it. Rule 40 of the Rules of Procedure supports this. The Hon'ble Deputy Speaker may be pleased to direct the Government that whatever questions are pending with them may be brought before the House within two days and answered. Their lapses will be recorded. To such of the questions which are not at all possible to be answered on the floor, written answers may be provided. All the questions may be placed on the Table with answers within 2 days.

**Mr. DEPUTY SPEAKER.**—We have already given to sufficient questions answers every day. If the Hon'ble Member wants more questions to be put in the question list, I will increase them to 30.

**Sri H. SIDDAVEERAPPA.**– In continuation of the observations made by my friend Sri Nagappa, I would like to add that you may be pleased to order to record the number of questions that were sent to Government for which no replies have been received. The number of those questions may be recorded. There are a number of call attention questions and privilege motions which could not come up before the House for various reasons. Therefore, number of privilege motions to which notices have been given and which have not been taken up so far, the number of call attention motions and also the number of motions sent for half-an-hour discussion may be recorded and placed on the Table of the House, so that the Government will be alert in these things and will not repeat the same excuses hereafter.

**Mr. DEPUTY SPEAKER.**—I will look into it.

Sri M. S. KRISHNAN.—Sir, in the proviso it is stated that at least the Government must communicate the reasons for the delay. I have sent more then 15 to 16 questions, and my friend Sri K. H. Patil has also submitted 18 to 20 questions. But, none of them have been answered though two months are over. Either the Speaker should tell us that there has been some delay on the part of the Government; or else, some other mechanism must be there, by which the questions should be answered immediately. You were pleased to say that more questions will be put for the other two days. I request that more questions may be put for the other two days and more time allotted for answering them.

ಶ್ರೀ ಎಸ್. ಎಸ್. ಶೆಟ್ಟರ್.—ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ, ಆದಕ್ಕೆ ತಾವು ಒಂದು ಉತ್ತರವನ್ನು ಕಳುಹಿಸಿದ್ದೀರಿ, ಗಮನಿಸಿ ತರುಣ ಸಂಘದವರು ಸಿದ್ದವೀರಪ್ಪನವರ ಹೇಳಿಕೆಯ ಮೇಲೆ ಒಂದು ಖಂಡನಾ ಪತ್ರವನ್ನು ಎಲ್ಲ ಸದಸ್ಯರಿಗೂ ಮುಟ್ಟುವಂತೆ ಕಳುಹಿಸಿದ್ದಾರೆ. ಏನು ಖಂಡನೆ ಮಾಡಿದ್ದಾರೆ, ಏಕೆ ಖಂಡನೆ ಮಾಡಿದ್ದಾರೆ ಎಂಬುದು ಗೊತ್ತಾಗದೆ ಸ್ವಲ್ಪ ಕಷ್ಟ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಶ್ರೀಮಾನ್ ಸಿದ್ದವೀರಪ್ಪನವರು ಒಂದು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು.

ಉಪಾಧ್ಯಕ್ಷರು.—ಅವರು ಹೇಳಿಕೆಯನ್ನು ಕೊಡುವುದು ಏನೂ ಬೇಕಾಗಿಲ್ಲ.

ಶ್ರೀ ಎಸ್. ಎಸ್. ಶೆಟ್ಟರ್.—ಇಲ್ಲದೇ ಇದ್ದರೆ ಅದು ಅನೇಕರನ್ನು ತೊಂದರೆಗೆ ಈಡು ಮಾಡುತ್ತದೆ.

Mr. DEPUTY SPEAKER.—The member knows the rules very well It does not involve any Government responsibility.

Sri S. S. SHETTAR.—It should be properly explained.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ತರುಣ ಸಂಘದವರು ಖಂಡನೆ ಮಾಡಿರತಕ್ಕ ವಿಚಾರ ಏನಿದೆ ಅದು ಶ್ರೀಮಾನ್ ಸಿದ್ದವೀರಪ್ಪನವರು ಈ ಶಾಸನಸಭೆಯಲ್ಲಿ ಆಡಿರತಕ್ಕ ಮಾತುಗಳ ಮೇಲೆ ಆಗಿದ್ದರೆ ಕಂಟೆಂಪ್ಟ್ ಆಫ್ ದಿ ಹೌಸ್ ಆಗುತ್ತದೆ. ಆದ್ದರಿಂದ ಶ್ರೀಮಾನ್ ಶೆಟ್ಟರ್‌ರವರು ಅದರ ಒಂದು ಪ್ರತಿಯನ್ನು ತರಿಸಿಕೊಟ್ಟರೆ ಅದನ್ನು ಪ್ರಿವಿಲೇಜ್ ಕಮಿಟಿಗೆ ಹಾಕಿ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಎಸ್. ಎಸ್. ಶೆಟ್ಟರ್.—ಈಗಾಗಲೆ ಅದರ ಪ್ರತಿಯನ್ನು ಕೊಟ್ಟಿದ್ದೇನೆ, ಅದನ್ನು ಮಾನ್ಯ ಅಧ್ಯಕ್ಷರು ನೋಡಿದ್ದಾರೆ, ಶ್ರೀಮಾನ್ ಸಿದ್ದವೀರಪ್ಪನವರೂ ಕೂಡ ನೋಡಿದ್ದಾರೆ. ಅವರು ಹೇಳಿಕೆ ಕೊಡದೇ ಹೋದರೆ ನಾಳೆದಿವಸ.....

ಶ್ರೀ ಎಚ್. ಸಿದ್ದವೀರಪ್ಪ.—ನನ್ನ ಹೆಸರನ್ನು ಈಗ ಮಾನ್ಯ ಸ್ನೇಹಿತರಾದ ಶ್ರೀಮಾನ್ ಶೆಟ್ಟರ್‌ರವರು ಎತ್ತಿರುವುದರಿಂದ ಈ ವಿಷಯದಲ್ಲಿ ಒಂದೆರಡು ಮಾತುಗಳನ್ನು ಆಡಬೇಕಾಗಿದೆ. ದೇಶದಲ್ಲಿ ಇದರ ವಿಚಾರದಲ್ಲಿ ಏನಾದರೂ ಬೇರೆ ಭಾವನೆ ಬರಬಹುದು ಎಂಬ ಒಂದು ಉದ್ದೇಶದಿಂದ ಮಾನ್ಯ ಸ್ನೇಹಿತರು ಈ ಪ್ರಶ್ನೆಯನ್ನು ಎತ್ತಿದ್ದಾರೆ ಎಂದು ನಾನು ಭಾವಿಸುತ್ತೇನೆ. ಈ ವಿಷಯ ಇಷ್ಟೆ. ನಾನು ಒಂದು ಡಿಮ್ಯಾಂಡ್ ಮೇಲೆ ಮಾತನಾಡುತ್ತಾ ಇರಬೇಕಾದರೆ ಶ್ರೀ ಬಸವೇಶ್ವರರ ಜಯಂತಿ ಉತ್ಸವದಲ್ಲಿ ಘನ ಸರ್ಕಾರದವರು ತೆಗೆದುಕೊಂಡಿರತಕ್ಕ ಕಾರ್ಯಕ್ರಮದ ವಿಚಾರದಲ್ಲಿ ಒಂದು ಟೀಕೆಯನ್ನು ಮಾಡಿದ್ದೇನೆ. ಆ ಟೀಕೆ ಮಾಡಿರತಕ್ಕದ್ದನ್ನು ಕೆಲವು ಸ್ನೇಹಿತರು ಈ ಸಭೆಯ ಹೊರಗಡೆಗೆ ಸರಿಯಾದ ಅರ್ಥವನ್ನು ಮಾಡಿಕೊಳ್ಳದೆ, ಯಾವ ಉದ್ದೇಶದಿಂದ ನಾನು ಟೀಕೆಯನ್ನು ಮಾಡಿದೆನೋ ಅದರ ಅರ್ಥವನ್ನು ಮಾಡಿಕೊಳ್ಳದೆ ತಪ್ಪು ಕಲ್ಪನೆ, ತಪ್ಪು ಭಾವನೆಯನ್ನು ಮಾಡಿಕೊಂಡು ಜನರಲ್ಲಿ ಬೇರೆ ಅಭಿಪ್ರಾಯ ಬರುವ ರೀತಿಯಲ್ಲಿ ಒಂದು ಪತ್ರವನ್ನು ಬರೆದಿದ್ದಾರೆ. ಅದನ್ನು ಎಲ್ಲ ಸದಸ್ಯರಿಗೂ ಕಳುಹಿಸಿದ್ದಾರೆ ಎಂದು ನಮ್ಮ ಸ್ನೇಹಿತರು ಹೇಳಿದರು, ನನಗೂ ಕೂಡ ಒಂದು ಪ್ರತಿಯನ್ನು ಕಳುಹಿಸಿದ್ದಾರೆ. ಅದಕ್ಕೆ ನಾನು ಹೆಚ್ಚಿನ ಮಹತ್ವವನ್ನು ಕೊಡಲಿಲ್ಲ. ಬಹುಶಃ ಈ ಪ್ರಜಾಪ್ರಭುತ್ವದಲ್ಲಿ ಅವರವರ ಅಭಿಪ್ರಾಯವನ್ನು ಅವರವರು ಹೇಳಲಿಕ್ಕೆ ಎಲ್ಲರಿಗೂ ಹಕ್ಕು ಇದೆ. ಈ ಸಭೆಯಲ್ಲಿರತಕ್ಕವರಿಗೂ ಹಕ್ಕು ಇದೆ, ಹೊರಗಡೆ ಇರತಕ್ಕವರಿಗೂ ಹಕ್ಕು ಇದೆ. ನಾನು ಮಾಡಿದಂತಹ ಟೀಕೆ ಬಸವೇಶ್ವರರ ವಿಚಾರದಲ್ಲಿ ಮಾಡಿದಂತಹ ಟೀಕೆ ಎಂದು ಅವರು ತಿಳಿದಿದ್ದರೆ ಅದು

ಶುದ್ಧ ತಪ್ಪು. ನಾನು ಮಾಡಿದ ಟೀಕೆ ಬಸವೇಶ್ವರರ ವಿಚಾರದಲ್ಲಿ ಆಗಲಿ, ಅವರ ತತ್ವದ ವಿಚಾರದಲ್ಲಿ ಆಗಲಿ ಅಲ್ಲ. ಅವರು ಘನವಾದ ವ್ಯಕ್ತಿ ಎಂಬ ವಿಚಾರದಲ್ಲೂ ಕೂಡ, ನಾನು ಅವರನ್ನು ಅಲ್ಲಗಳೆಯಲಿಲ್ಲ. ನಾನು ಮಾಡಿದ್ದು ಇಷ್ಟೆ. ಈ ದೇಶದಲ್ಲಿ ಜಾತ್ಯತೀತ ರಾಷ್ಟ್ರ ಇರಬೇಕಾದರೆ ಇಂತಹ ದೊಡ್ಡವರ ಜಯಂತಿ ಉತ್ಸವವನ್ನು ಘನ ಸರ್ಕಾರದವರು ಸರ್ಕಾರದ ಪರವಾಗಿ ಮಾಡಬೇಕಾದ ಅವಶ್ಯಕತೆ ಇರಲಿಲ್ಲ, ಅದನ್ನು ಮಾಡಬೇಕಾಗಿರುವವರು, ಮಾಡತಕ್ಕವರು ಸಾರ್ವಜನಿಕರು. ಈ ರೀತಿ ಪ್ರತಿಯೊಬ್ಬ ವ್ಯಕ್ತಿಗಳ ವಿಚಾರದಲ್ಲಿ ಮಾಡುವುದಾದರೆ ನಮ್ಮ ದೇಶದಲ್ಲಿ 3000 ಜಾತಿಗಳು ಇವೆ, ಅಷ್ಟೇ ಧರ್ಮಗಳು ಇವೆ, ಅಷ್ಟೇ ಒಳ ಜಾತಿಗಳು ಇವೆ, ಅವರವರಿಗೆ ಅವರವರದು ದೊಡ್ಡದು, ಅವರವರ ಘನ ಅವರವರಿಗೆ ದೊಡ್ಡದು, ಆದ್ದರಿಂದ ಇದನ್ನೆಲ್ಲಾ ಸರ್ಕಾರದ ಮೂಲಕ ಮಾಡಬೇಕಾದರೆ ಅದಕ್ಕೆ ಒಂದು ಡಿಪಾರ್ಟ್‌ಮೆಂಟೇ ಮಾಡಬೇಕಾಗುತ್ತದೆ ಮತ್ತು ವರ್ಷದಲ್ಲಿ 365 ದಿವಸಗಳು ಈ ಜಯಂತಿ ಉತ್ಸವಗಳನ್ನು ಮಾಡಬೇಕಾದರೆ, ಸಾಲದು. ಇದನ್ನು ಮಾಡಿ ನನಗೂ ಅನುಭವ ಇದೆ. ಇವತ್ತು ಯಾವ ಒಂದು ಘನ ತತ್ವ ಉದ್ದೇಶವನ್ನು ಇಟ್ಟುಕೊಂಡು ಮಾಡಿದ್ದೀರಿ ಅದು ಕಾರ್ಯರೂಪದಲ್ಲಿ ಬರುವಾಗ ಅನೇಕ ಸಂದರ್ಭಗಳಲ್ಲಿ ವಿರುದ್ಧವಾಗಿ ಪರಿಣಮಿಸಿದೆ ಎಂಬುದನ್ನು ನಾನು ಮನಗಂಡಿದ್ದೇನೆ. ಇದರ ವಿಚಾರದಲ್ಲಿ ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ, ನಾನು ಯಾರ ಮೇಲೂ ಟೀಕೆ ಮಾಡುವುದಕ್ಕೆ ಹೋಗುತ್ತಿಲ್ಲ. ಬಸವೇಶ್ವರರ ವಿಚಾರದಲ್ಲಿ ಯಾವ ಭಕ್ತಿ, ಪ್ರೇಮ, ವಿಶ್ವಾಸ ಅವರಿಗೆ ಇದೆಯೋ ಅದಕ್ಕೆ ಇಮ್ಮಡಿಯಾದ ಭಕ್ತಿ, ಪ್ರೇಮ, ವಿಶ್ವಾಸ ನನಗೂ ಇದೆ, ಅವರಿಗಿಂತ ಹೆಚ್ಚಿನ ನಂಬಿಕೆ ನನ್ನಲ್ಲಿ ಇದೆ. ನನಗೂ ಅವರಿಗೂ ಇರತಕ್ಕ ಭಿನ್ನಾಭಿಪ್ರಾಯ ಇಷ್ಟೆ, ಇದನ್ನು ಸರ್ಕಾರದವರು ಮಾಡಬಾರದಾಗಿತ್ತು, ಸಾರ್ವಜನಿಕ ಸಂಸ್ಥೆಗಳು ಮಾಡಬೇಕಾಗಿತ್ತು ಎಂಬುದು ಎಷ್ಟೋ ಅಷ್ಟೆ. ಇದರ ತತ್ವವನ್ನು ಅರಿತು ನುರಿತವರು ಮತ್ತು ಕರಗತವಾಗಿ ತಿಳಿದುಕೊಂಡಿರತಕ್ಕ ಶ್ರೀಮಾನ್ ಜತ್ತಿಯವರ ನೇತೃತ್ವದಲ್ಲಿ ಏರ್ಪಟ್ಟ ಸಮಿತಿಯವರು ಇದನ್ನು ಮಾಡಬೇಕಾಗಿತ್ತೇ ಹೊರತು ಶ್ರೀಮಾನ್ ಕಂಠಿಯವರು ಮಾಡಿದ್ದು ಏನಿದೆ ಇದು ದುಡ್ಡು ಕೊಟ್ಟು ಪ್ರಚಾರ ಮಾಡುವುದಕ್ಕೆ ಏರ್ಪಾಟಾದ ವ್ಯವಸ್ಥೆಯಾಗಿದೆ. ನಾನು ಮಂತ್ರಿಯಾಗಿದ್ದಾಗ ಇಂತಹ ಒಂದು ಪ್ರಸಂಗ ನಡೆಯಿತು. ಸಂಸ್ಕೃತಿ ಪ್ರಚಾರಕಾರ್ಯ ಅಂತ ಹೇಳಿ ನಾವು ಕೈಕೊಂಡಿದ್ದೆವು, ಸಂಸ್ಕೃತಿ ಪ್ರಚಾರ ಕಾರ್ಯದಲ್ಲಿ ಅವರಿಗೆ ಟಿ.ಎ. ಡಿ.ಎ. ಕೊಟ್ಟು ಹೊಗಳಿಸಿಕೊಳ್ಳಲಿಕ್ಕೆ ಸರ್ಕಾರದವರು ಕಳುಹಿಸಿದ್ದಾರೆ ಎಂಬ ಟೀಕೆ ನಮ್ಮ ಮೇಲೆ ಬಂತು, ಕೆಲವು ಮಾನ್ಯ ಸದಸ್ಯರು ಈ ದಿವಸ ಸರ್ಕಾರದಲ್ಲಿ ಆ ಕಡೆಯೂ ಇದ್ದಾರೆ. ಇದನ್ನು ನಾನು ಏಕೆ ಹೇಳುತ್ತೇನೆ ಎಂದರೆ ಅನಾವಶ್ಯಕವಾಗಿ ನಾವು ಟೀಕೆಗೆ ಗುರಿಯಾಗಬಾರದು. ಅನೇಕರು ಅನೇಕ ಪಂಥ, ಅನೇಕ ಮತಗಳನ್ನು ಆನು ಸರಿಸುತ್ತಾ ಇರತಕ್ಕ ಕಾಲದಲ್ಲಿ ಯಾರೋ ಒಬ್ಬರ ಹೊಗಳಿಕೆಗಾಗಿ ಇದನ್ನು ಮಾಡಿದ್ದಾರೆ ಎಂಬ ಭಾವನೆ ಬರಬಾರದು. ಇವರಿಗಿಂತಲೂ ಹೆಚ್ಚು ವಿಶ್ವಾಸ ಇರತಕ್ಕ ಜನ ಹೊರಗಡೆ ಇರುವಾಗ ಸರ್ಕಾರದವರು ಕೈ ಹಾಕಬಾರದು ಎಂಬ ಉದ್ದೇಶದಿಂದ ಟೀಕೆ ಮಾಡಿದೆನೇ ಹೊರತು ಮತ್ತೆ ಬೇರೆ ಅಲ್ಲ. ನಾ ಪ್ರಭಾತದ ವಿಚಾರದಲ್ಲಿ ನಾನು ಹೇಳಿದ್ದು ನಿಜ. ಸುಪ್ರಭಾತ ಹೇಳಬೇಕಾದರೆ...

ಶ್ರೀ ಬಿ. ಡಿ. ಜತ್ತಿ (ಆಹಾರ ಮತ್ತು ನಿತ್ಯೋಪಯೋಗಿ ಸರಬರಾಜು ಶಾಖೆಗಳ ಮಂತ್ರಿಗಳು).--ಬಸವೇಶ್ವರನ ಸುಪ್ರಭಾತ ಇದುವರೆಗೂ ಯಾರೂ ಹೇಳಿಲ್ಲ, ತಾವು ಹೇಳಿದ್ದು ಶರಣಬಸವೇಶ್ವರದ್ದು ಇರಬೇಕು. ಬಸವೇಶ್ವರರ ವಿಷಯದಲ್ಲಿ ಬರೆದದ್ದು ಇದುವರೆಗೂ ಯಾರೂ ಹಾಡಿಲ್ಲ ನೀವು ಹೇಳಿದ್ದು ತಪ್ಪು, ಬಸವೇಶ್ವರರದು ಅಲ್ಲ, ಅದು ಶರಣಬಸವೇಶ್ವರರಿಗೆ ಸಂಬಂಧ ಇದೆ.

ಶ್ರೀ ಎಚ್. ಸಿದ್ದವೀರಪ್ಪ.—ತಪ್ಪು ಕಲ್ಪನೆ ಆಗಿರಬಹುದು. ರೇಡಿಯೋದಲ್ಲಿ ಕೇಳಬೇಕಾದರೆ ಅರ್ಧಂಬರ್ಧ ಕೇಳಿದೆ ಅದು ಇನ್ನಾವುದೋ ಇದ್ದಿರಬೇಕು. ವೆಂಕಟೇಶ ಸುಪ್ರಭಾತ ಬರುತ್ತದೆ, ಅದೇ ರೀತಿ ಬಸವೇಶ್ವರನ ಸುಪ್ರಭಾತ ಮಾಡಿಸಿದ್ದಾರೋ ಏನೋ ಎಂಬ ಭಾವನೆ ಬಂತು. ಅದು ತಪ್ಪು ಅಂತ ಹೇಳಿದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಬಸವೇಶ್ವರರು ನಮ್ಮ ದೇಶದಲ್ಲಿ ಏನು ಹೇಳಿದರು ? ನಮ್ಮ ಮನಸ್ಸಿಗೆ ಏನು ಸತ್ಯವಾಗಿ ಕಾಣುತ್ತದೆ ಅದರಂತೆ ನಡೆಯಬೇಕೆಂದು ಹೇಳಿದರು ಅವರು ಹೇಳಿದ್ದಕ್ಕೆ ಅಪ್ರಿಯವಾಗಿ ಅಥವಾ ವಿರುದ್ಧವಾಗಿ ಬೇರೆಯವರು ಏನಾದರೂ ಹೇಳಿದರೆ ಬಹುಶಃ ನಾನು ಹೇಳಿದ ಮಾತನ್ನು ಬೇರೆಯವರು ಅನ್ಯಮತೀಯರು ಹೇಳಿದರೆ ಜಾತೀವಾದವನ್ನು ತರುತ್ತಾರೆ ಎಂಬ ಅಪಾದನೆಗೆ ಗುರಿಯಾಗುತ್ತಾ ಇದ್ದರು. ಬಸವೇಶ್ವರರ ಅನುಯಾಯಿಯಾಗಿ ಹೇಳುತ್ತೇನೆ, ಬಸವೇಶ್ವರ ಜಯಂತಿ ವಿಷಯದಲ್ಲಿ ಸರ್ಕಾರ ಮಾಡಿರುವುದು ತಪ್ಪು, ಆ ರೀತಿ ಮಾಡಬಾರದಾಗಿತ್ತು ಎಂದು ನಾನು ಹೇಳಿದ್ದೆನೋ ಈಗಲೂ ಅದೇ ನನ್ನ ಖಚಿತವಾದ ಅಭಿಪ್ರಾಯ. ಆ ಅಭಿಪ್ರಾಯವನ್ನು ಬದಲಾವಣೆ ಮಾಡಲಿಕ್ಕೆ ಯಾವ ಬೇರೆ ಸನ್ನಿವೇಶವೂ ಕೂಡ ಕೂಡಿ ಬಂದಿಲ್ಲ ಎಂದು ಹೇಳುತ್ತೇನೆ.